ದೂರವಾಣಿ ಸಂಖ್ಯೆ : 080-22212343
ಫ್ಯಾಕ್ಸ್ ಸಂಖ್ಯೆ : 080-22278803
ಅಂತರ್ಜಾಲ : www.kptcl.com

ಇ-ಮೇಲ್ ವಿಳಾಸ :director.ahr.kptcl@gmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್.) : ಯು40109ಕೆಎ1999ಎಸ್‌ಜಿಸಿ025521
ಕಂಪನಿಯ ಅಧಿಕೃತ ಕಛೇರಿ : ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-560 009.

**ಸಂಖ್ಯೆ: ಕವಿಪ್ರನಿನಿ/ಬಿ14/15921/2010-11** ದಿನಾಂಕ : 17 SEP 2019

**ಅಧೀಕ್ಷಕ ಇಂಜಿನಿಯರ್(ವಿ),**
**ಪ್ರಸರಣ(ಕಾ ಮತ್ತು ನಿ)ವೃತ್ತ, ಕವಿಪ್ರನಿನಿ,**
**ಮುನಿರಾಬಾದ್.**

**ಮಾನ್ಯರೇ,**

ವಿಷಯ: ಇ.ಪಿ.ಎಫ್ ಯೋಜನೆ ಬಗ್ಗೆ ಸ್ಪಷ್ಟೀಕರಣ.

ಉಲ್ಲೇಖ: 1. ತಮ್ಮ ಕಚೇರಿ ಪತ್ರ ಸಂಖ್ಯೆ: 2372-73, ದಿನಾಂಕ: 22.07.2019.

2. ಉಪ ಪ್ರಧಾನ ವ್ಯವಸ್ಥಾಪಕರು(ತಾಂತ್ರಿಕ), ನಿಗಮ ಕಾರ್ಯಾಲಯ, ಕವಿಪ್ರನಿನಿ ರವರ ಪತ್ರ ಸಂಖ್ಯೆ: ಕವಿಪ್ರನಿನಿ/ಐ.ಆರ್.ಓ/ಬಿ14/6014/2002-03, ದಿನಾಂಕ: 08.09.2015

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಗುತ್ತಿಗೆ/ಹೊರಗುತ್ತಿಗೆ ಕೆಲಸಗಾರರುಗಳಿಗೆ ಮಾಸಿಕ ಸಂಭಾವನೆ ರೂ.15,000/- ಕ್ಕಿಂತ ಕಡಿಮೆ ಇದ್ದಲ್ಲಿ, ಇಂತಹ ಕೆಲಸಗಾರರುಗಳು ಇ.ಪಿ.ಎಫ್ ಯೋಜನೆಗೆ ಕಡ್ಡಾಯವಾಗಿ ಒಳಪಡುತ್ತಾರೆ. ಇ.ಪಿ.ಎಫ್ ಯೋಜನೆಗೆ ಒಳಪಡುವ ಗುತ್ತಿಗೆ/ಹೊರಗುತ್ತಿಗೆ ಕೆಲಸಗಾರರುಗಳ ಗುತ್ತಿಗೆ ಅವಧಿಯಲ್ಲಿ ಮಾಸಿಕ ಸಂಭಾವನೆಯು ರೂ.15,000/-ಕ್ಕಿಂತ ಹೆಚ್ಚಾದಲ್ಲಿಯೂ ಸಹಾ, ಇ.ಪಿ.ಎಫ್‌ನ ಗರಿಷ್ಠ ಮೊತ್ತ ರೂ.15,000/-ಕ್ಕೆ ನೌಕರನ ಪಾಲಿನ ವಂತಿಗೆ ಹಾಗೂ ಉದ್ಯೋಗದಾತರ ವಂತಿಗೆಯನ್ನು ಕಡ್ಡಾಯವಾಗಿ ಕಡಿತಗೊಳಿಸಿ ಇ.ಪಿ.ಎಫ್ ಇಲಾಖೆಗೆ ಪಾವತಿಸಬೇಕಾಗಿರುತ್ತದೆ. ಅದರಂತೆ ಅರೆಕಾಲಿಕ ಶುಚಿಗಾರರಿಗೆ ದಿನಾಂಕ: 01.04.2019 ರಿಂದ ಜಾರಿಗೆ ಬರುವಂತೆ ಅವರ ಮಾಸಿಕ ಸಂಭಾವನೆಯನ್ನು ರೂ.10,000/- ದಿಂದ ರೂ.16370/-ಕ್ಕೆ ಹೆಚ್ಚಿಸಲಾಗಿದ್ದರೂ ಸಹಾ ಇ.ಪಿ.ಎಫ್ ಯೋಜನೆಯನ್ನು ರೂ.15000/-ಕ್ಕೆ ಸೀಮಿತಗೊಳಿಸಲಾಗಿದೆ.

ಮುಂದುವರೆದು, ಹೊಸದಾಗಿ ಗೊತ್ತುಪಡಿಸಿಕೊಳ್ಳುವ ಗುತ್ತಿಗೆ/ಹೊರಗುತ್ತಿಗೆ ಕೆಲಸಗಾರರುಗಳಿಗೆ ಮಾಸಿಕ ಸಂಭಾವನೆ ರೂ.15000/-ಕ್ಕಿಂತ ಹೆಚ್ಚಾಗಿ ನಿಗಧಿಪಡಿಸಿದಲ್ಲಿ ಇ.ಪಿ.ಎಫ್ ಯೋಜನೆ ಒಳಪಡುವುದಿಲ್ಲವೆಂದು ಸ್ಪಷ್ಟೀಕರಿಸಲಾಗಿದೆ.

ಅದರಂತೆ ಕವಿಪ್ರನಿನಿಯಲ್ಲಿ ಕೆ.ಟಿ.ಟಿ.ಪಿ ಕಾಯ್ದೆ-1999 ರನ್ವಯ ಹೊರಗಿನ ಏಜೆನ್ಸಿ ಮೂಲಕ ಪಡೆಯಲಾದ ಪಾಳಿ ಇಂಜಿನಿಯರ್ ದರ್ಜೆ-1 ಕೆಲಸಗಾರರುಗಳಿಗೆ ಮಾಸಿಕ ರೂ.15,000/-ಕ್ಕಿಂತ ಹೆಚ್ಚು ಸಂಭಾವನೆ ಪಾವತಿಸುತ್ತಿರುವುದರಿಂದ, ಸದರಿಯವರುಗಳು ಇ.ಪಿ.ಎಫ್ ಯೋಜನೆ ಅನ್ವಯವಾಗುವುದಿಲ್ಲವೆಂದು ತಿಳಿಸಲಾಗಿದೆ.

ತಮ್ಮ ವಿಶ್ವಾಸಿ,

17/09

ನಿರ್ದೇಶಕರು(ಆಡಳಿತ ಮತ್ತು ಮಾ.ಸಂ),
ಕವಿಪ್ರನಿನಿ

ಪ್ರತಿಯನ್ನು ಮಾಹಿತಿಗಾಗಿ:

1. ಉಪ ಪ್ರಧಾನ ವ್ಯವಸ್ಥಾಪಕರು(ತಾಂತ್ರಿಕ), ನಿಗಮ ಕಾರ್ಯಾಲಯ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.

<u>ಅಧೀಕ್ಷಕ ಇಂಜಿನಿಯರ್, ಐ.ಟಿ.ಮತ್ತು ಎಂ.ಐ.ಎಸ್ ರವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ **www.kptcl.com/eprasarana** ಅಂತರ್ಜಾಲದಲ್ಲಿ ಪ್ರಕಟಿಸಲು</u>

1. ಎಲ್ಲಾ ಮುಖ್ಯ ಇಂಜಿನಿಯರ್(ವಿ), ಕವಿಪ್ರನಿನಿ.
2. ಎಲ್ಲಾ ನಿಯಂತ್ರಣಾಧಿಕಾರಿ, ಕವಿಪ್ರನಿನಿ.
3. ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿ), ಕವಿಪ್ರನಿನಿ.
4. ಎಲ್ಲಾ ಉಪಲೆಕ್ಕನಿಯಂತ್ರಣಾಧಿಕಾರಿ, ಕವಿಪ್ರನಿನಿ.
5. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್, ಕವಿಪ್ರನಿನಿ.